## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಇಂಡಿ ತಾಲ್ಲೂಕು ಚಡಚಣ ಗ್ರಾಮ ಪಂಚಾಯತ್‌ನ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅವ್ಯವಹಾರ- ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ- ಅಂತಿಮ ಆದೇಶ

**ಓದಲಾಗಿದೆ:-** 1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ. ಜಿಲ್ಲಾ ಪಂಚಾಯತ್. ವಿಜಯಪುರ ಇವರ ಪತ್ರ ಸಂಖ್ಯೆ:ಜಿಪಂಆ/ಗ್ರಾಅಪಂ/ಸಿಬ್ಬಂದಿ/ಸಿಆರ್-328/2012-13 ದಿನಾಂಕ:06.09.2013.

2. ಸರ್ಕಾರದ ಸಮ ಸಂಖ್ಯೆಯ ಕಾರಣ ಕೇಳುವ ನೋಟೀಸ್ ದಿನಾಂಕ: 30.12.2013.

3. ಡಾ॥ ಜಯರಾಂ ಎಂ.ಚವ್ಹಾಣ್. ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಇಂಡಿ. ಇವರ ಲಿಖಿತ ರಕ್ಷಣಾ ಹೇಳಿಕೆ ದಿನಾಂಕ: 31.01.2014.

****

**ಪ್ರಸ್ತಾವನೆ:**

ವಿಜಯಪುರ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಇಂಡಿ ತಾಲ್ಲೂಕು ಪಂಚಾಯತ್‌ನ ಚಡಚಣ ಗ್ರಾಮ ಪಂಚಾಯಿತಿಯಲ್ಲಿ 2019-10. 2010-11 ಮತ್ತು 2011-12ನೇ ಸಾಲುಗಳಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಬೋಗಸ್ ಜಾಬ್‌ಕಾರ್ಡ್‌ಗಳನ್ನು ವಿತರಿಸಲಾಗಿರುತ್ತದೆ ಎಂದು ಹಾಗೂ ಕಾಮಗಾರಿಗಳಲ್ಲಿ ಅವ್ಯವಹಾರ ಮತ್ತು ಭ್ರಷ್ಟಾಚಾರ ನಡೆದಿರುತ್ತದೆ ಎಂದು ಆರೋಪಿಸಿ ಶ್ರೀ ವಿಠಲ.ಎಸ್.ಬಡಿಗೇರ. ಇವರು ಭಾರತ ಸರ್ಕಾರಕ್ಕೆ ನೀಡಿದ್ದ ದೂರಿನ ಮೇರೆಗೆ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ನಿರ್ದೇಶನಾಲಯದ ಅಧಿಕಾರಿಗಳು ತನಿಖೆಯನ್ನು ನಡೆಸಿ ನೀಡಿದ್ದ ವರದಿಯಲ್ಲಿ. ಚಡಚಣ ಗ್ರಾಮ ಪಂಚಾಯಿತಿಯಲ್ಲಿ 2009-10 2010-11 ಮತ್ತು 2011-12ನೇ ಸಾಲುಗಳಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಬೋಗಸ್ ಜಾಬ್ ಕಾರ್ಡ್‌ಗಳನ್ನು ವಿತರಿಸಿರುವುದು ಹಾಗೂ ಕಾಮಗಾರಿಗಳನ್ನು ಮಾರ್ಗಸೂಚಿಗಳ ವಿರುದ್ಧವಾಗಿ ನಿರ್ವಹಿಸಿರುವುದು ಕಂಡು ಬಂದಿದ್ದ ಕಾರಣ. ಇದಕ್ಕೆ ಕಾರಣಕರ್ತರಾದ ಅಧಿಕಾರಿ/ನೌಕರರ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ. ನಿರ್ದೇಶನಾಲಯವು ಶಿಫಾರಸ್ಸು ಮಾಡಿರುವುದಾಗಿ. ಹಾಗು ವೃಂದ-ಸಿ ದರ್ಜೆಯ ನೌಕರರ ವಿರುದ್ಧ ಶಿಸ್ತುಕ್ರಮವನ್ನು ಜರುಗಿಸಲಾಗುತ್ತಿದೆ ಎಂದು ತಿಳಿಸುತ್ತಾ. ಯೋಜನೆಯ ಮೇಲ್ವಿಚಾರಣೆ ಮಾಡುವಲ್ಲಿ ವಿಫಲರಾಗಿರುವ ಇಂಡಿ ತಾಲ್ಲೂಕು ಪಂಚಾಯತ್‌ನ ಈ ಕೆಳಕಂಡ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ಮೇಲೆ(1) ರಲ್ಲಿ ಓದಲಾದ ಪತ್ರದಲ್ಲಿ ವಿಜಯಪುರ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರು ಕೋರಿರುತ್ತಾರೆ.

1. ರಾಜ್‌ಕುಮಾರ್. ಎಂ.ತೊರವಿ;
2. ಡಾ॥ ಬಿ.ಆರ್.ಚಿಕ್ಕೊಂಡ
3. ಡಾ॥ ಜಯರಾಂ ಎಂ.ಚವ್ಹಾಣ್.
4. ಶ್ರೀ ಸಿ.ಬಿ.ಕುಂಬಾರ.

ವಿಜಯಪುರ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರ ಪತ್ರದಲ್ಲಿ ಪ್ರಸ್ತಾಪಸಿದ್ದ 4 ಕಾರ್ಯನಿರ್ವಾಹಕ ಅಧಿಕಾರಿಗಳ ಪೈಕಿ ಶ್ರೀ ಸಿ.ಬಿ.ಕುಂಬಾರ ಹಾಗೂ ಡಾ॥ ಬಿ.ಆರ್.ಚಿಕ್ಕೊಂಡ ಇವರುಗಳ ಸೇವೆಯು ಶಿಸ್ತುಪ್ರಾಧಿಕಾರಿಯಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆಯಲ್ಲಿ ಇಲ್ಲದೆ ಇದ್ದುದರಿಂದ, ಇವರುಗಳ ವಿರುದ್ಧ ನಿಯಮಾನುಸಾರ ಶಿಸ್ತಿನ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳ ಮಾತೃ ಇಲಾಖೆಗಳಾದ, ಅನುಕ್ರಮವಾಗಿ, ಯೋಜನೆ ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗಳನ್ನು ಕೋರಲಾಗಿರುತ್ತದೆ.

ಇಂಡಿ ತಾಲ್ಲೂಕು ಪಂಚಾಯತ್‌ನ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ॥ ಜಯರಾಂ ಎಂ.ಚವ್ಹಾಣ, ಹಾಗೂ ಶ್ರೀ ರಾಜ್‌ಕುಮಾರ್ ಎಂ.ತೊರವಿ, ಇವರುಗಗಳಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ ನಿಯಮಾವಳಿಗಳು 1957ರ ನಿಯಮ 12(1)(ಎ)ರನ್ವಯ ಮೇಲೆ (2)ರಲ್ಲಿ ಓದಲಾದ ದಿನಾಂಕ:30.12.2013 ರಂದು ಕಾರಣ ಕೇಳುವ ನೋಟೀಸ್ಸಿನೊಂದಿಗೆ ದೋಷಾರೋಪಣೆಗಳನ್ನು ಜಾರಿಮಾಡಿ, ಲಿಖಿತ ರಕ್ಷಣಾ ಹೇಳಿಕೆಯನ್ನು 15 ದಿನಗಳೊಳಗಾಗಿ ಸಲ್ಲಿಸುವಂತೆ ಹಾಗೂ ನಿಗಧಿತ ಅವಧಿಯೊಳಗೆ ಲಿಖಿತ ಹೇಳಿಕೆಯನ್ನು ಸಲ್ಲಿಸದೆ ಇದ್ದಲ್ಲಿ, ನಿಮ್ಮ ಅಹವಾಲು ಏನೂ ಇಲ್ಲವೆಂದು ಭಾವಿಸಿ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದೆಂದು ಸೂಚಿಸಲಾಗಿತ್ತು.

ಅಧಿಕಾರಿಗಳ ವಿರುದ್ಧದ ಆರೋಪಗಳು ಈ ಕೆಳಕಂಡಂತಿರುತ್ತದೆ.:-

**ಡಾ॥ ಜಯರಾಂ.ಎಂ.ಚವ್ಹಾಣ್:-**

***ಆರೋಪ-1:-*** ದಿನಾಂಕ: 06-02-2012 ರಿಂದ 01-08-2013ರ ವರೆಗೆ ವಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕು ಪಂಚಾಯತ್‌ನಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯಾಗಿಕೆಲಸ ನಿರ್ವಹಿಸುತ್ತಿದ್ದಾಗ, ಚಡಚಣ ಗ್ರಾಮ ಪಂಚಾಯತದಲ್ಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಯದ್ಯೋಗ ಖಾತ್ರಿ ಯೋಜನೆಯಡಿ, ಬೋಗಸ್ ಜಾಬ್ ಕಾರ್ಡಗಳನ್ನು ವಿತರಿಸಿರುವ ಬಗ್ಗೆ ಮತ್ತು 2009-10, 2010-11 ಮತ್ತು 2011-12ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಕೈಗೊಂಡ ಕಾಮಗಾರಿಗಳಲ್ಲಿ ಅವ್ಯವಹಾರ ಹಾಗೂ ಭ್ರಷ್ಟಾಚಾರಗಳು ನಡೆದಿರುತ್ತದೆಂದು, ಶ್ರೀ ವಿಠ್ಠಲ.ಎಸ್.ಬಡಿಗೇರ, ಸಾ:ಚಡಚಣ, ಇವರು, ಭಾರತ ಸರ್ಕಾರಕ್ಕೆ ಸಲ್ಲಿಸಿದ ದೂರು ಅರ್ಜಿಗೆ ಸಂಬಂಧಿಸಿದಂತೆ ತನಿಖೆ ನಡೆಸಿ ಕಂಡುಬಂದ ನ್ಯೂನ್ಯತೆಗಳಿಗೆ ಸಂಬಂದಿಸಿದ ಅಧಿಕಾರಿ ಹಾಗೂ ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಕುರಿತು ಜಿಲ್ಲಾ ಪಂಚಾಯತ್, ಬಿಜಾಪುರ ಕಛೇರಿಗೆ ವರದಿ ಸಲ್ಲಿಸುವಂತೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ವಿಜಾಪುರ ಇವರು ತಮ್ಮ ಪತ್ರ ಸಂಖ್ಯೆ: ಜಪಂಅ/ಉಖಾಯೋ/ಸಿಆರ್-68/2012-13 ದಿನಾಂಕ:10-09-2012 ರನ್ವಯ ನಿಮಗೆ ನಿರ್ದೇಶನ ನೀಡಿದ್ದರೂ ನೀವು ,ತಪ್ಪಿತಸ್ಥ ನೌಕರರ ವಿರುದ್ಧ ಶಿಸ್ತಿನ ಕ್ರಮ ಜರುಗಿಸುವ ಕುರಿತು ಅವರು ಎಸಗಿರುವ ಆಪಾದನೆಗಳ ಬಗ್ಗೆ ಆಪಾದನಾ ಪಟ್ಟಿ ಅನುಬಂಧ-1 ರಿಂದ 4ಗಳನ್ನು ತಯಾರಿಸಿ, ಜಿಲ್ಲಾ ಪಂಚಾಯತಕ್ಕೆ ಸಲ್ಲಿಸದೇ, ನಿಲಕ್ಷ್ಯತನವನ್ನು ತೋರಿ ಗಂಭೀರ ಸ್ವರೂಪದ ಕರ್ತವ್ಯಲೋಪವೆಸಗಿರುತ್ತೀರಿ. ಈ ರೀತಿಯ ಕ್ರಮದಿಂದಾಗಿ ಕರ್ನಾಟಕ ನಾಗರೀಕ ಸೇವಾ (ನಡತೆ, ನಿಯಮಾವಳಿಗಳು)-1966ರ ನಿಯಮ-3(i) (ii) (iii) ಉಲ್ಲಂಘಿಸಿರುತ್ತಾರೆ.

***ಆರೋಪ-2:-*** ಶ್ರೀ ವಿಠ್ಠಲ ಎಸ್. ಬಡಿಗೇರ, ಇವರು ಸಲ್ಲಿಸಿದ ದೂರು ಅರ್ಜಿಯಲ್ಲಿನ ಆರೋಪಗಳ ಬಗ್ಗೆ ತನಿಖೆ ನಡೆಸಲು, ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ರಾಜ್ಯ ನಿರ್ದೇಶನಾಲಯದ ಅಧಿಕಾರಿಗಳ ತಂಡವು ಚಡಚಣ ಗ್ರಾಮ ಪಂಚಾಯತಕ್ಕೆ ಬರುವವರಿದ್ದಾರೆ ಅಂತಾ ನಿಮಗೆ ಮುಂಚಿತವಾಗಿ ತಿಳಿಸಲಾಗಿದ್ದರೂ ಸದರಿ ತನಿಖಾ ತಂಡದವರು ದಿನಾಂಕ: 07-11-2012 ಮತ್ತು 08-11-2012 ಎರಡು ದಿನ ಚಡಚಣ ಗ್ರಾಮ ಪಂಚಾಯತಿಯಲ್ಲಿ

ತನಿಖೆ ನಡೆಸಲು ಬಂದಾಗ ನೀವು ತನಿಖಾ ಸಮಯದಲ್ಲಿ ಗೈರು ಹಾಜರಾಗಿರುತ್ತೀರಿ. ಅಲ್ಲದೇ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಇವರ ಮತ್ತು ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ರಾಜ್ಯ ನಿರ್ದೇಶನಾಲಯದ ಆದೇಶಗಳನ್ನು ಉಲ್ಲಂಘಿಸಿ. ತಾಲ್ಲೂಕಾ ಮಟ್ಟದ ಜವಬ್ದಾರಿಯುತ ಅಧಿಕಾರಿಗೆ ಸಲ್ಲಸ ರೀತಿಯಲ್ಲಿ ವರ್ತಿಸಿ ಕರ್ತವ್ಯಲೋಪವೆಸಗಿರುತ್ತೀರಿ. ಈ ರೀತಿಯ ಕ್ರಮದಿಂದಾಗಿ ಕರ್ನಾಟಕ ನಾಗರೀಕ ಸೇವಾ (ನಡತೆ. ನಿಯಮಾವಳಿಗಳು)-1966ರ ನಿಯಮ-3(i) (ii) (iii) ಉಲ್ಲಂಘಿಸಿರುತ್ತಾರೆ.

***ಆರೋಪ-3:-*** ಮೇಲೆ ಆಪಾದನೆ ನಂ.1 ರಲ್ಲಿ ತಿಳಿಸಿರುವಂತೆ. ಶ್ರೀ ವಿಠ್ಠಲ.ಎಸ್.ಬಡಿಗೇರ. ಸಾ: ಚಡಚಣ ಇವರ ದೂರು ಅರ್ಜಿಯಲ್ಲಿನ ದೂರುಗಳ ಬಗ್ಗೆ. ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ರಾಜ್ಯ ನಿರ್ದೇಶನಾಲಯದ ತನಿಖಾ ತಂಡವು ತನಿಖೆ ಮಾಡಿ ಹೋದ ನಂತರ. ನಿರ್ದೇಶಕರು. ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬೆಂಗಳೂರು ಇವರು ತಮ್ಮ ಪತ್ರ ದಿನಾಂಕ: 26-12-2012 ರನ್ವಯ ಸಲ್ಲಿಸಿದ ವರದಿಯನ್ನು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು. ಜಿಲ್ಲಾ ಪಂಚಾಯತಿ ವಿಜಾಪುರ ಇವರು ತಮ್ಮ ಪತ್ರ ಸಂಖ್ಯೆ: ಜಪಂಅ/ಉಖಾಯೋ/ಸಿಆರ್-68/2012-13 ದಿನಾಂಕ:10-09-2012 ರನ್ವಯ ನಿಮಗೆ ಕಳುಹಿಸಿ. ಸದರಿ ವರದಿಯಲ್ಲಿ ನಿಮ್ಮ ಹಂತದಲ್ಲಿ ಕ್ರಮ ಜರುಗಿಸಬೇಕಾದ ಅಂಶಗಳ ಬಗ್ಗೆ ಕ್ರಮ ಜರುಗಿಸಿ. ಒಂದು ವಾರದಲ್ಲಿ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದ್ದರೂ. ಸಹ ಯಾವುದೇ ರೀತಿಯ ಕ್ರಮವನ್ನು ಕೈಗೊಳ್ಳದೇ. ಪ್ರಕರಣವನ್ನು 8 ತಿಂಗಳ ಅವಧಿಯವರೆಗೆ ಬಾಕಿ ಇಟ್ಟು. ತದನಂತರ ವರ್ಗಾವಣೆ ಹೊಂದಿರುತ್ತೀರಿ. ತನಿಖಾ ವರದಿಯ ಮೇಲೆ ಕೈಗೊಳ್ಳಬೇಕಾದ ಕ್ರಮವನ್ನು ಕಾಲಮಿತಿಯೊಳಗೆ ಕೈಗೊಳ್ಳದೇ ನಿರ್ಲಕ್ಷತನ/ಬೇಜವಬ್ದಾರಿತನ ಎಸಗಿ ತಾಲ್ಲೂಕಾ ಮಟ್ಟದ ಅಧಿಕಾರಿಗೆ ಸಲ್ಲದ ರೀತಿಯಲ್ಲಿ ವರ್ತಿಸಿ ಗಂಭೀರ ಸ್ವರೂಪದ ಕರ್ತವ್ಯಲೋಪವೆಸಗಿರುತ್ತೀರಿ. ಈ ರೀತಿಯ ಕ್ರಮದಿಂದಾಗಿ ಕರ್ನಾಟಕ ನಾಗರೀಕ ಸೇವಾ (ನಡತೆ. ನಿಯಮಾವಳಿಗಳು)-1966ರ ನಿಯಮ-3(i) (ii) (iii) ಉಲ್ಲಂಘಿಸಿರುತ್ತಾರೆ.

<u>ಶ್ರೀ ರಾಜ್‌ಕುಮಾರ್ ಎಂ.ತೊರವಿ:-</u>

**<u>ಆಪಾದನೆ-1</u>**

ಈ ಹಿಂದೆ 2009-10ನೇ ಸಾಲಿನಲ್ಲಿ. ದಿನಾಂಕ: 28-08-2009 ರಿಂದ 10-12-2010ರ ವರೆಗೆ. ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ಇಂಡಿ ಇಲ್ಲಿ ಕರ್ತವ್ಯನಿರ್ವಹಿಸುತ್ತಿದ್ದಾಗ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಯದ್ಯೋಗ ಖಾತ್ರಿ ಯೋಜನೆಯಡಿ. ಚಡಚಣ ಗ್ರಾಮ ಪಂಚಾಯಿತಿ ಆಗಿನ ಕಾರ್ಯದರ್ಶಿ ಶ್ರೀ ಎಸ್.ಪಿ. ಸಿಂಗೆ ಇವರು. ನಂ.10.20. 30.850. ಕಾರ್ಡಗಳನ್ನು. ವಿತರಿಸಿದ್ದರೂ ನೀವು ಸದರಿ ಯೋಜನೆಯ ತಾಲ್ಲೂಕಾ ಮಟ್ಟದ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳಾಗಿದ್ದರೂ. ಭೋಗಸ್ ಜಾಬ್‌ಕಾರ್ಡಗಳನ್ನು ವಿತರಿಸಿದ್ದರೂ. ನೀವು ಅವುಗಳನ್ನು ರದ್ದುಪಡಿಸಲು ಯಾವುದೇ ಕ್ರಮ ಕೈಕೊಳ್ಳದೇ ನಿರ್ಲಕ್ಷ್ಯತನ ತೋರಿರುತ್ತೀರಿ. ಅಲ್ಲದೇ ಸದರಿ ಯೋಜನೆಯ ಮೇಲ್ವಿಚಾರಣೆ ಮಾಡುವಲ್ಲಿ ವಿಫಲರಾಗಿರುತ್ತೀರಿ. ಈ ರೀತಿಯ ಕ್ರಮದಿಂದಾಗಿ ಕರ್ನಾಟಕ ನಾಗರೀಕ ಸೇವಾ (ನಡತೆ. ನಿಯಮಾವಳಿಗಳು)-1966ರ ನಿಯಮ-3(i) (ii) (iii) ಉಲ್ಲಂಘಿಸಿರುತ್ತಾರೆ.

**<u>ಆಪಾದನೆ-2</u>**

ಈ ಹಿಂದೆ 2009-10ನೇ ಸಾಲಿನಲ್ಲಿ. ದಿನಾಂಕ: 28-08-2009 ರಿಂದ 10-12-2010ರ ವರೆಗೆ. ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ಇಂಡಿ ಅಂತಾ ಕೆಲಸ ನಿರ್ವಹಿಸುತ್ತಿದ್ದಾಗ. ಚಡಚಣ ಗ್ರಾಮ ಪಂಚಾಯತ್‌ಯ ಆಗಿನ ಬಿಲ್ ಕಲೆಕ್ಟರ್ ಶ್ರೀ.ರಾಮಚಂದ್ರ

ಲಕ್ಷ್ಮಣ ಬನಸೋಡೆ ಇವರ ಹೊಲದಲ್ಲಿ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ನಿಯಮಗಳನ್ನು ಉಲ್ಲಂಘಿಸಿ ಯಂತ್ರವನ್ನು ಉಪಯೋಗಿಸಿ ಕೃಷಿ ಹೊಂಡ ನಿರ್ಮಾಣದ ಕಾಮಗಾರಿಯನ್ನು ಮಾಡಿದ್ದರೂ. ತಾಲ್ಲೂಕ್ ಮಟ್ಟದ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳಾದ ನೀವು ಯಾವುದೇ ಕ್ರಮ ಕೈಕೊಳ್ಳದೇ ನಿಯಮ ಬಾಹಿರವಾಗಿ ನಿರ್ಮಿಸಿದ ಕಾಮಗಾರಿಗೆ ಕೂಲಿ ಹಣ ಸಂದಾಯ ಮಾಡಿರುವುದಕ್ಕೆ ಕಾರಣೀಭೂತರಾಗಿರುತ್ತೀರಿ ಈ ರೀತಿಯ ಕ್ರಮದಿಂದಾಗಿ ಕರ್ನಾಟಕ ನಾಗರೀಕ ಸೇವಾ (ನಡೆತೆ, ನಿಯಮಾವಳಿಗಳು)-1966ರ ನಿಯಮ-3(i) (ii) (iii) ಉಲ್ಲಂಘಿಸಿರುತ್ತಾರೆ.

ಶ್ರೀ ರಾಜ್‌ಕುಮಾರ್ ಎಂ.ತೊರವಿ. ಇವರು ಕಾರಣ ಕೇಳುವ ನೋಟೀಸ್‌ಗೆ ಇದುವರೆವಿಗೂ ತಮ್ಮ ರಕ್ಷಣಾ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಆದುದರಿಂದ ಇವರಿಗೆ ದಿನಾಂಕ: 30.12.2013 ರಂದು ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 12(1)(ಎ) ರನ್ವಯ. ಜಾರಿ ಮಾಡಿರುವ ಕಾರಣ ಕೇಳುವ ನೋಟೀಸ್‌ಗೆ ಅಧಿಕಾರಿಯ ಯಾವುದೇ ಅಹವಾಲು ಇಲ್ಲವೆಂದು ಭಾವಿಸಿ. ಸದರಿಯವರ ಕರ್ತವ್ಯಲೋಪಕ್ಕೆ ಅನುಗುಣವಾಗಿ ನಿಯಮಾನುಸಾರ ದಂಡನೆಯನ್ನು ವಿಧಿಸಲು ತೀರ್ಮಾನಿಸಲಾಗಿದೆ.

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ ನಿಯಮಾವಳಿಗಳು 1957ರ ನಿಯಮ 12(1)(ಎ)ರನ್ವಯ ದಿನಾಂಕ: 30.12.2013 ರಂದು ಜಾರಿ ಮಾಡಲಾಗಿದ್ದ ಕಾರಣ ಕೇಳುವ ನೋಟಿಸಿಗೆ ಮೇಲೆ(3) ರಲ್ಲಿ ಓದಲಾದಂತೆ, ಡಾ॥ ಜಯರಾಂ.ಎಂ.ಚವ್ಹಾಣ್. ಇವರು ನೀಡಿರುವ ಲಿಖಿತ ರಕ್ಷಣಾ ಹೇಳಿಕೆಯಲ್ಲಿ ಈಕೆಳಕಂಡಂತೆ ತಿಳಿಸುತ್ತಾ. ತಮ್ಮ ವಿರುದ್ಧದ ಆಪಾದನೆಗಳನ್ನು ಕೈಬಿಟ್ಟು ಪ್ರಕರಣವನ್ನು ಮುಕ್ತಾಯ ಮಾಡುವಂತೆ ಕೋರಿರುತ್ತಾರೆ.

**ಆರೋಪ:-1** ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ. ಜಿಲ್ಲಾ ಪಂಚಾಯತ್. ಬಿಜಾಪೂರಿವರು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವಂತೆ ಪತ್ರ ಸಂಖ್ಯೆ:ಜಿಪಂಅ/ಉಖಾಯೋ/ಸಿಆರ್-68/2012-13 ದಿನಾಂಕ:09.10.2012ರ ಮೂಲಕ ನಿರ್ದೇಶನ ನೀಡಿರುತ್ತಾರೆ. ಅದರಂತೆ ಶ್ರೀ ಎಸ್.ಪಿ.ಶಿಂಗೆ. ಹಿಂದಿನ ಪ್ರಭಾರಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ. ಗ್ರಾಮ ಪಂಚಾಯತ್. ಚಡಚಣ ಹಾಗೂ ಶ್ರೀ ಆರ್.ಬಿ.ಬಿರಾದಾರ. ಈಗಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ. ಗ್ರಾಮ ಪಂಚಾಯತ್. ಚಡಚಣ ಇವರಿಗೆ ದಿನಾಂಕ:25.10.2012 ರಂದು ಕಾರಣ ಕೇಳುವ ನೋಟೀಸ್‌ನ್ನು ಜಾರಿಮಾಡಲಾಯಿತು. ಸದರಿ ವಿಷಯದಲ್ಲಿ ನನ್ನ ಕರ್ತವ್ಯವನ್ನು ಚಾಚೂ ತಪ್ಪದೇ ಸರಿಯಾಗಿ ನಿರ್ವಹಿಸಿದ್ದೇನೆ. ಹಾಗೂ ನಾನು ಯಾವುದೇ ರೀತಿಯ ನಿರ್ಲಕ್ಷತನವನ್ನು ಕರ್ತವ್ಯದಲ್ಲಿ ತೋರಿರುವುದಿಲ್ಲ.

**ಆರೋಪ:-2** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ರಾಜ್ಯ ನಿರ್ದೇಶನಾಲಯದ ಅಧಿಕಾರಿಗಳ ತಂಡವು ಚಡಚಣ ಗ್ರಾಮ ಪಂಚಾಯತ್‌ಗೆ ದಿನಾಂಕ:07.11.2012 ಮತ್ತು 08.11.2012ರಂದು ತನಿಖೆಗೆ ಬಂದಾಗ ನನಗೆ ಕಾರ್ಯಾಲಯದ ಕೆಲಸದ ಒತ್ತಡ ಹಾಗೂ ಅಧ್ಯಕ್ಷರು ತಾಲ್ಲೂಕು ಪಂಚಾಯತ್. ಇಂಡಿ ಇವರು ವಿವಿಧ ಯೋಜನೆಗಳ ಮಾಹಿತಿಯನ್ನು ಕೊಡಲು ತಿಳಿಸಿದ ಪ್ರಯುಕ್ತ ನಮ್ಮ ಕಾರ್ಯಾಲಯದ ಅಧಿಕಾರಿಯಾದ ಶ್ರೀ ಸಿ.ಬಿ.ಕುಂಬಾರ. ಯೋಜನಾಧಿಕಾರಿಗಳು. ಇವರಿಗೆ ತನಿಖಾ ತಂಡಕ್ಕೆ ಸಹಕರಿಸಲು ಮತ್ತು ತನಿಖಾ ತಂಡದೊಂದಿಗೆ ಹಾಜರಿರಲು ಸೂಚಿಸಲಾಗಿತ್ತು. ಅದರಂತೆ ಸದರಿ ಅಧಿಕಾರಿಯು ತನಿಖಾ ತಂಡದೊಂದಿಗೆ ಹಾಜರಿದ್ದು ಮಾಹಿತಿಯನ್ನು ನೀಡಿರುತ್ತಾರೆ.

**ಆರೋಪ:-3** ನಿರ್ದೇಶಕರು. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯ ಯೋಜನೆಯ ಗ್ರಾಅಪಂ.ರಾಜ್ ಇಲಾಖೆ ಬೆಂಗಳೂರು ಇವರು ತಮ್ಮ ಪತ್ರ ದಿನಾಂಕ:26.12.2012 ರನ್ವಯ ಸಲ್ಲಿಸಿದ ವರದಿಯನ್ನು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ. ಜಿಲ್ಲಾ ಪಂಚಾಯತ್. ಬಿಜಾಪುರರವರು ಜನವರಿ 2013ರ ಮಾಹೆಯಲ್ಲಿ ನನಗೆ ಕಳುಹಿಸಿರುತ್ತಾರೆ. 2012-13ನೇ ಆರ್ಥಿಕ ವರ್ಷ ಮುಕ್ತಾಯದ ಹಂತದಲ್ಲಿರುವ ಕಾರಣ ಎಲ್ಲಾ ಇಲಾಖೆಗಳ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಕೆಲಸದ ಒತ್ತಡವಿದ್ದ ಕಾರಣ ಹಾಗೂ ಸಾರ್ವತ್ರಿಕ ವಿಧಾನ

ಸಭೆ ಚುನಾವಣೆಗಳು ಏಪ್ರಿಲ್ ಮತ್ತು ಮೇ 2013 ರ ಮಾಹೆಯಲ್ಲಿ ನಡೆಯುತ್ತಿದ್ದು. ಸದರಿ ಚುನಾವಣೆಯಲ್ಲಿ ನನಗೆ ಸೆಕ್ಟೋರಲ್ ಅಧಿಕಾರಿಯಾಗಿ ಹಾಗೂ ಚುನಾವಣಾ ನೀತಿ ಸಂಹಿತೆ ಅಧಿಕಾರಿ ಎಂದು ನೇಮಿಸಿದ ಪ್ರಯುಕ್ತ ಸದರಿ ವರದಿಯ ಮೇಲೆ ಕ್ರಮಕೈಗೊಳ್ಳಲು ವಿಳಂಬವಾಗಿರುತ್ತದೆ.

ಡಾ॥ ಜಯರಾಂ.ಎಂ.ಚವ್ಹಾಣ್. ಇವರು ನೀಡಿರುವ ಲಿಖಿತ ರಕ್ಷಣಾಹೇಳಿಕೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಬೋಗಸ್ ಜಾಬ್ ಕಾರ್ಡ್‌ಗಳನ್ನು ವಿತರಿಸಿರುವ ತಪ್ಪಿತಸ್ಥ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕಾರಣ ಕೇಳುವ ನೋಟಿಸನ್ನು ಜಾರಿಗೊಳಿಸಲು ಹಾಗೂ ಚಡಚಣ ಗ್ರಾಮ ಪಂಚಾಯತಿಗೆ ತನಿಖಾ ತಂಡವು ಬಂದಾಗ ತನಿಖಾ ತಂಡಕ್ಕೆ ಸಹಕರಿಸಲು ತಿಳಿಸದ್ದರೂ. ಸಹ ತಂಡದೊಂದಿಗೆ ಸಹಕರಿಸದೆ ಮತ್ತು ತನಿಖಾ ತಂಡವು ದಿನಾಂಕ: 10.09.2012 ರಲ್ಲಿನ ವರದಿಯಲ್ಲಿ ತಿಳಿಸಿರುವಂತೆ ನಿಗಧಿತ ಅವಧಿಯಲ್ಲಿ ಕ್ರಮವಹಿಸದೇ. 8 ತಿಂಗಳ ಅವಧಿಯವರೆಗೆ ಬಾಕಿಯಿಟ್ಟು. ಅನುಪಾಲನಾ ವರದಿಯನ್ನು ಸಲ್ಲಿಸದೆ ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆವಾದುದರಿಂದ. ಹಾಗೂ ಅಧಿಕಾರಿಯ ರಕ್ಷಣಾ ಹೇಳಿಕೆಯು ಅವರ ವಿರುದ್ಧದ ಆರೋಪಗಳನ್ನು ಕೈಬಿಡಲು ಸ-ಕಾರಣ/ಸಮಂಜಸ ತೃಪ್ತಿಕರವಾಗಿಲ್ಲದೆ ಇರುವುದರಿಂದ. ಇವರ ಕರ್ತವ್ಯಲೋಪಕ್ಕೆ ಸಂವಾದಿಯಾಗಿ. ದಂಡನೆಯನ್ನು ವಿಧಿಸಲು ಮತ್ತು ಶ್ರೀ ರಾಜ್‌ಕುಮಾರ್ ಎಂ.ತೊರವಿ. ಇವರು ಕಾರಣ ಕೇಳುವ ನೋಟೀಸ್‌ಗೆ ಇದುವರೆವಿಗೂ ತಮ್ಮ ರಕ್ಷಣಾ ಹೇಳಿಕೆಯನ್ನು ಸಲ್ಲಿಸದೆ ಇರುವುದರಿಂದ. ಇವರ ಯಾವುದೇ ಅಹವಾಲು/ಲಿಖಿತ ರಕ್ಷಣ ಹೇಳಿಕೆ ಏನೂ ಇಲ್ಲವೆಂದು ಭಾವಿಸಿ. ಸದರಿಯವರ ಕರ್ತವ್ಯಲೋಪಕ್ಕೆ ಅನುಗುಣವಾಗಿ ನಿಯಮಾನುಸಾರ ದಂಡನೆಯನ್ನು ವಿಧಿಸಲು ಸರ್ಕಾರವು ತೀರ್ಮಾನಿಸಿದೆ ಆದುದರಿಂದ. ಈಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 447 ಪಬವ 2013 ಬೆಂಗಳೂರು ದಿನಾಂಕ:15-06-2016</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ. ವಿಜಯಪುರ ಜಿಲ್ಲೆ ಇಂಡಿ ತಾಲ್ಲೂಕು ಪಂಚಾಯತ್‌ನಲ್ಲಿ ಈ ಹಿಂದೆ ಕಾರ್ಯನಿರ್ವಾಹಕ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಈ ಕೆಳಕಂಡ ಅಧಿಕಾರಿಗಳಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ. ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು-1957ರ ನಿಯಮ-8(iii) ರನ್ವಯ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ರಹಿತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

1. ಡಾ॥ ಜಯರಾಂ.ಎಂ.ಚವ್ಹಾಣ್. (ಪ್ರಸ್ತುತ ಸಹಾಯಕ ನಿರ್ದೇಶಕರು. ಪಶು ಆಸ್ಪತ್ರೆ ಕುಷ್ಟಗಿ)
2. ಶ್ರೀ ರಾಜ್‌ಕುಮಾರ್. ಎಂ.ತೊರವಿ. (ಪ್ರಸ್ತುತ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಇಂಡಿ) ಮೂಲತ: ಸಹಾಯಕ ಕಾರ್ಯಪಾಲಕ ಅಭಿಯಂತರರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

15/6/16
(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**<u>ಇವರಿಗೆ,</u>**

1. ಮಹಾಲೇಖಪಾಲರು(ಜಿ&ಎಸ್‌ಎಸ್‌ಎ)/(ಇ&ಆರ್‌ಎಸ್‌ಎ)/(ಎ&ಇ) ರವರ ಕಾರ್ಯದರ್ಶಿ. ಕರ್ನಾಟಕ ಹೊಸ ಕಟ್ಟಡ. "ಆಡಿಟ್ ಭವನ". ಅಂಚೆ ಪೆಟ್ಟಿಗೆ ಸಂಖ್ಯೆ: 5398.

ಬೆಂಗಳೂರು-01

2. ಸರ್ಕಾರದ ಪ್ರಧಾನ ಕಾರ್ಯದರ್ಶಿ. ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ. ವಿಕಾಸ ಸೌಧ. ಬೆಂಗಳೂರ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ. ಜಿಲ್ಲಾ ಪಂಚಾಯತ್. ವಿಜಯಪುರ.
4. ಅಧೀನ ಕಾರ್ಯದರ್ಶಿ(ಸೇವೆಗಳು) ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
5. ಅಧೀನ ಕಾರ್ಯದರ್ಶಿ. (ಸೇವೆಗಳು-ಎ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
6. ಸಂಬಂಧಿಸಿದ ಅಧಿಕಾರಿಗಳಿಗೆ.

<u>ಪ್ರತಿ ಮಾಹಿತಿಗಾಗಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶೀ. ವಿಧಾನಸೌಧ. ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ಜಂಟಿ ಕಾರ್ಯದರ್ಶಿ(ಆಡಳಿತ) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3. ಮೇಲ್ವಿಚಾರಕರು. ಗಣಕ ಕೋಶ. ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.